ಆ) ಸಿಂಗಟಾಲೂರು ಏತ ನೀರಾವರಿ ಯೋಜನೆಯಲ್ಲಿ ಸೂಕ್ಷ್ಮ/ಹನಿ ನೀರಾವರಿ (ಮೈಕ್ರೋ ಇರಿಗೇಷನ್) ಅಳವಡಿಸುವ ಬಗ್ಗೆ ಯೋಜನಾ ವರದಿಯನ್ನು ₹ 5768.04 ಕೋಟಿಗಳಿಗೆ ತಯಾರಿಸಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಸರ್ಕಾರದ ಪರಿಶೀಲನೆಯಲ್ಲದೆ.

ಈ) ಸಿಂಗಟಾಲೂರು ಯೋಜನೆಯಡಿ ಸೂಕ್ಷ್ಮ ನೀರಾವರಿ ಪದ್ಧತಿ ಅಳವಡಿಸುವ ಕಾಮಗಾರಿಗಳನ್ನು 2 ವರ್ಷಗಳಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಅರಣ್ಯ ಪ್ರದೇಶವನ್ನು ವಿಗಂಡಿಸಿರುವುದು

940 (449); ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ (ರೋಣ)

ಅ) ರಾಜ್ಯದಲ್ಲಿ ಅರಣ್ಯ ಪ್ರದೇಶವನ್ನು ಯಾವ ಯಾವ ಪ್ರಕಾರಗಳಾಗಿ ವಿಂಗಡಿಸಲಾಗಿದೆ. ಅವು ಯಾವುವು;

ಆ) ರೋಣ ಮತ ಕ್ಷೇತ್ರದಲ್ಲಿ ಬರತಕ್ಕಂತಹ ಅಂತಹ ಕ್ಷೇತ್ರ ಮತ್ತು ಸ್ಥಳಗಳು ಯಾವುವು? (ಪೂರ್ಣ ಮಾಹಿತಿ ನೀಡುವುದು)

ಶ್ರೀ ಬಿ. ರಮಾನಾಥ್ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಪರಿಣಿತ ತಜ್ಞರ ಸಮಿತಿ–I ಪ್ರಕಾರ ರಾಜ್ಯದಲ್ಲಿ ಅರಣ್ಯ ಪ್ರದೇಶಗಳನ್ನು ಈ ಕೆಳಗಿನಂತೆ ವರ್ಗೀಕರಿಸಲಾಗಿದೆ:

1) ಮೀಸಲು ಅರಣ್ಯ
2) ರಕ್ಷಿತ ಅರಣ್ಯ
3) ಗ್ರಾಮ ಅರಣ್ಯ
4) ವರ್ಗೀಕರಿಸದ ಅರಣ್ಯ
5) ಖಾಸಗಿ ಅರಣ್ಯ

ಆ) ರೋಣ ಮತ ಕ್ಷೇತ್ರದಲ್ಲಿ ಬರುವ ಅರಣ್ಯ ಪ್ರದೇಶ ವಿವರ ಈ ಕೆಳಗಿನಂತಿದೆ.

ಕ್ರ. ಸಂ	ತಾಲ್ಲೂಕು	ಅರಣ್ಯದ ವಿವರ	ಗ್ರಾಮದ ಹೆಸರು	ಅರಣ್ಯ ವಿಸ್ತೀರ್ಣ (ಹೆ)
1	ರೋಣ	ಮೀಸಲು ಅರಣ್ಯ	ಕಲ್ಲಿಗನೂರು ಮತ್ತು ನೆಲ್ಲೂರು	361.58
2	ರೋಣ	ಅರಣ್ಯ ಇಲಾಖೆಗೆ ಹಸ್ತಾಂತರಿಸಿದ ಕಂದಾಯ ಖಿರಾಬು ಭೂಮಿಯ ವಿವರ (ಸಿ ಮತ್ತು ಡಿ ವರ್ಗದ ಭೂಮಿ ಹೊರಡುಪಡಿಸಿ)	ಬಳಗೂಡ	6.68
			ಬೊಮ್ಮಸಾಗರದ	318.55
			ಇಟಗಿ	3.63
			ಸವಡಿ	1.11
			ಶಾಂತಗೇರಿ	132.79
			ನಿಡಗುಂದಿ	2.01
			ನೆಲ್ಲೂರು	71.80
			ಮುತಿಗೇರಿ	11.26
			ಒಟ್ಟು	547.83
3	ಮುಂಡರಗಿ	ಮೀಸಲು ಅರಣ್ಯ	ಡೋಣಿ	3849.485
			ಡಂಬಳ	581.876
			ಹಿರೇವಡ್ಡಟ್ಟಿ	1909.554
			ಚಿಕ್ಕವಡ್ಡಟ್ಟಿ	1012.245
			ಗುಡ್ಡದ ಬೂದಿಹಾಳ	460.487
			ದಿಂಡೂರ	91.932
			ಹಾರೂಗೇರಿ	593.444
			ಶಿಂಗಟ ರಾಯಕರ	426.202
			ಕಲೂರ	902.603
			ಮುರಡಿ	358.221
			ಅತ್ತಿಕಟ್ಟಿ	229.898
			ಒಟ್ಟು	10415.947

ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವುದು

941 (450); ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ (ರೋಣ)

ಅ) ಗದಗ ಜಿಲ್ಲೆಯಲ್ಲಿರುವ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ ಮಾಡಲು ಸರ್ಕಾರಕ್ಕೆ ಬಂದ ಪ್ರಸ್ತಾವನೆಗಳೆಷ್ಟು;

ಆ) ರೋಣ ಮತ್ತು ಮುಂಡರಗಿ ತಾಲ್ಲೂಕಿನಲ್ಲಿ ಇರತಕ್ಕಂತ ತಾಂಡಗಳೆಷ್ಟು;

ಇ) ಈ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಹಾಗಿದ್ದಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕಾಲಮಿತಿ ಏನು?

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)

ಅ) ಒಂದು (ಭಾರತನಗರ)

ಆ) ರೋಣ – 21

ಮುಂಡರಗಿ – 06

ಇ) ಸ್ವೀಕೃತಗೊಂಡ ಭಾರತನಗರ ತಾಂಡಾವನ್ನು ಕಂದಾಯ ಗ್ರಾಮವನ್ನಾಗಿ ರಚಿಸುವ ಸಲುವಾಗಿ ಪ್ರಾಥಮಿಕ ಅಧಿಸೂಚನೆ ಹೊರಡಿಸಲು ಕ್ರಮ ವಹಿಸಲಾಗುತ್ತಿದೆ.

ಈ) ಗದಗ ಜಿಲ್ಲೆಯಲ್ಲಿರುವ ಇತರ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ರಚಿಸುವುದಕ್ಕೆ ಸಂಬಂಧಿಸಿದಂತೆ ಸರಹದ್ದು ಗುರುತಿಸುವಿಕೆ ಗ್ರಾಮ ಪಂಚಾಯಿತಿಯಿಂದ ಅನುಮೋದನೆ, ಸರ್ವೆ ಕಾರ್ಯ, ಹಾಗೂ ಇತರೆ ಅಂಶಗಳನ್ನು ಪರಿಶೀಲಿಸದ ನಂತರ ಜಿಲ್ಲಾಧಿಕಾರಿಗಳಿಂದ ಪೂರ್ಣ ಪ್ರಮಾಣದ ಪ್ರಸ್ತಾವನೆ ಸ್ವೀಕೃತವಾದ ಕೂಡಲೇ ಸರ್ಕಾರದಲ್ಲಿ ಪರಿಶೀಲಿಸಿ ಎಲ್ಲಾ ಮಾಹಿತಿಗಳೊಡನೆ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಇಲಾಖೆಯ